ಎಂದು ಬರೆದರು. ಆದರೆ, ಇಂತಹ ಶೋಷಣೆ, ಹಿಂಸೆ ಮುಂತಾದ ಸಾಮಾಜಿಕ ಸಂಗತಿಗಳನ್ನು ಬದಿಗಿಟ್ಟು, ಬೇರೆ ದಿಕ್ಕಿನಲ್ಲಿ ಚಲಿಸಿದ ಚಿತ್ತಾಲರ ಕವಿತೆ, ವೈಯಕ್ತಿಕವನ್ನು ಸಾರ್ವತ್ರಿಕವಾಗಿ ಬದಲಾಯಿಸಲು ಕವಿತೆಯ ಹಾದಿಯನ್ನು ಕಂಡುಕೊಂಡಿತು. ಅದು 'ಸ್ವಂತ' ಮತ್ತು 'ಅನ್ಯ'ದ ನಡುವಿನ ಅಂತರವನ್ನು ಅಳಿಸಿಬಿಡುವ ಹಾದಿ. ಚಿತ್ತಾಲರದು ಕೌಟುಂಬಿಕದ ಚಪ್ಪರದ ಮೇಲೆ ಹಬ್ಬಿದ ಲೋಕಾನುಭವದ ಬಳ್ಳಿ. ಹೀಗೆ ಸಾಮಾಜಿಕ ಸಂದರ್ಭದ ಅನುಸಂಧಾನವನ್ನು ಬಿಡುವ ಆಯ್ಕೆಯ ಫಲವಾಗಿ ಚಿತ್ತಾಲರ ಕವಿತೆಯು ಸದ್ಯದ ಸಂಕೋಲೆಗಳಿಂದ ಬಿಡಿಸಿಕೊಂಡು ಸದಾ ಸರ್ವದಾ ಇರುವ ವಿಷಾದದ ಮೂಲಗಳ ಕಡೆಗೆ ಜಿಗಿಯುವುದು ಸಾಧ್ಯವಾಯಿತು. ನಿತ್ಯದ ಸಮಸ್ಯೆಗಳೆಂಬ ಮರಗಳ ಅವಲೋಕನದಲ್ಲಿಯೇ ಮೈಮರೆತ ನಮ್ಮನ್ನು ಸಾರ್ವಕಾಲಿಕ ಸಮಸ್ಯೆಗಳ ಕಾಡಿನ ಕಡೆಗೆ ಸೆಳೆಯುವುದು ಅವರಿಗೆ ಸಾಧ್ಯವಾಯಿತು. ಹಾಗೆಂದರೆ ಇತರ ಕವಿಗಳು ಈ ಕಡೆಗೆ ತಿರುಗಲೇ ಇಲ್ಲವೆಂದು ಅರ್ಥವಲ್ಲ. ಚಿತ್ತಾಲರು ಈ ಕಡೆಗೆ ತಮ್ಮನ್ನು ತಾವು ತೆತ್ತುಕೊಂಡರು.

ಗಂಗಾಧರ ಚಿತ್ತಾಲ ಮತ್ತು ಗೋಪಾಲಕೃಷ್ಣ ಅಡಿಗರ ಕಾವ್ಯಸೃಷ್ಟಿಯು ಹೆಚ್ಚುಕಡಿಮೆ ಸಮಕಾಲಿಕವೂ ಸಮಾನಾಂತರವೂ ಆಗಿರುವುದು ಮುಖ್ಯ ವಿಷಯ. 'ಕಾಲದ ಕರೆ' ಮತ್ತು 'ಕಟ್ಟುವೆವು ನಾವು' 1948ರಲ್ಲಿ ಪ್ರಕಟವಾದವು. 'ಮನುಕುಲದ ಹಾಡು' (1960) ಮತ್ತು 'ಭೂಮಿಗೀತ' (1959), 'ಹರಿವ ನೀರಿದು'(1971) ಮತ್ತು 'ವರ್ಧಮಾನ'(1972) ಗಳೂ ಜೊತೆಜೊತೆಯಾಗಿಯೇ ಬಂದವು. ಹಾಗೆಯೇ ಕೆ.ಎಸ್. ನರಸಿಂಹಸ್ವಾಮಿಯವರ ಕವನ ಸಂಕಲನಗಳಾದ 'ಶಿಲಾಲತೆ' (1958) ಮತ್ತು 'ಮನೆಯಿಂದ ಮನೆಗೆ' (1960) ಸರಿಸುಮಾರು ಈ ಕಾಲದವು. ಈ ಮೂವರ ಆಶಯ, ನಿಲುವು ಮತ್ತು ಕಾವ್ಯಮಾರ್ಗಗಳು ಸಂಪೂರ್ಣವಾಗಿ ಬೇರೆ ಬೇರೆಯಾಗಿದ್ದವು. ಅಡಿಗರ ಸುತ್ತ ಸೇರಿಕೊಂಡ ಲೇಖಕ ಸಮುದಾಯವು ಉಳಿದಿಬ್ಬರನ್ನು ನಿರ್ಲಕ್ಷಿಸಿದ್ದು ಎಲ್ಲರಿಗೂ ತಿಳಿದಿರುವ ಸಂಗತಿ. ಆದರೆ, ಈ ಕವಿಗಳಿಗೆ ನಂತರ ಬಂದ ಪೀಳಿಗೆಗಳು ತೋರಿಸಿದ ಪ್ರತಿಕ್ರಿಯೆಯು ಬೇರೆಯದೇ ಆಗಿದೆ. ಇದಕ್ಕೆ 'ಕಾವ್ಯೇತರ'ವಾದ ಕಾರಣಗಳು ಇರುವಂತೆಯೇ ಜನಸಾಮಾನ್ಯರ ಹಾಡುಪಾಡುಗಳನ್ನು ಇವರು ಗ್ರಹಿಸಿದ ವಿಭಿನ್ನ ಬಗೆಗಳೂ ಕಾರಣ. ನರಸಿಂಹಸ್ವಾಮಿ ಮತ್ತು ಚಿತ್ತಾಲರು ಬದುಕಿನ ತಾತ್ವಿಕತೆ ಮತ್ತು ಪರಿಮಿತಿಗಳ ಬಗ್ಗೆ ಆಲೋಚನೆ ಮಾಡಿಯೂ ಹೆಚ್ಚು ಜೀವಪರವಾದ, ಪ್ರೀತಿ ತುಂಬಿದ ಧಾರಣಶಕ್ತಿಯ ಕಾವ್ಯವನ್ನು ರಚಿಸಿದರು. ಅಷ್ಟೇ ಅಲ್ಲ, ಅವರ ಕವಿತೆಗಳು ಹೆಚ್ಚು ಸಂವಹನಶೀಲವೂ ಆರ್ದ್ರವೂ ಆಗಿದ್ದವು. ಅಡಿಗರ ಕಾವ್ಯದ ವಿಶಿಷ್ಟತೆಗೆ ಯಾವುದೇ ಅನ್ಯಾಯ ಮಾಡದೆ ಹೇಳಿದರೂ, ಇವರಿಬ್ಬರಿಗೆ ಸಿಗಬೇಕಾದಷ್ಟು ಜನಸನ್ನಿಧಿ ಸಿಗಲಿಲ್ಲ. (ಅಡಿಗರ ನವ್ಯಕಾವ್ಯಕ್ಕೂ ಜನಮನ್ನಣೆ ಸಿಗಲಿಲ್ಲವೆಂಬ ಮಾತು ಬೇರೆ!).

ಈ ಕವಿಯು ಇಂದ್ರಿಯಗಳು ಮತ್ತು ಮನಸ್ಸು-ಹೃದಯಗಳ ಮೂಲಕ ಮನುಷ್ಯನು ಪಡೆಯುವ ಸಂತೋಷ, ನೋವು ಮತ್ತು ತಳಮಳಗಳನ್ನು ಎಂದಿಗೂ ಅಲ್ಲಗಳೆದವರಲ್ಲ. ಆದಷ್ಟು ಅನುಭವಗಳನ್ನು ಆದಷ್ಟು ವೇಗವಾಗಿ ಹೀರಬೇಕೆಂಬ ಹಂಬಲ ಅವರನ್ನು ಆವರಿಸಿದ ಕ್ಷಣದಲ್ಲಿ,

'ವೇಗದುದ್ವೇಗವೇ ನಾಡಿನಾಡಿಯಲಿಳಿದು  
ಧುಮ್ಮಿಕ್ಕುತ್ತಿದೆ. ಆಹಾ ಇನ್ನೂನೂ ಗತಿ ಬೇಕು  
ಇನ್ನೂನು ಗತಿ ಬೇಕು! ಅಂತವಿಲ್ಲದನಂತ  
ತೆರೆದರೂ ಆದರಂತ ಅರೆನಿಮಿಷದಲಿ ಪಡೆಯು  
ವಂಥ ಪದಗತಿ ಬೇಕು! ಅಹಾಹಾ ವೇಗವೇ!  
ಆಳು ನನ್ನನಾಳು – ನಿನ್ನಿಂದೆ ಸಾರ್ಥಕತೆ  
ನಿನ್ನಿಂದೆ ಸಫಲತೆಯು. ನನ್ನ ಸರ್ವಸ್ವವಾಗು'

**(ವೇಗಲಹರಿ, 1948)**

ಅವರ 'ಕನಸು ತಲೆಯಲಿ ತುಂಬಿದಂಥ ಹುಡುಗ', 'ಕಾಮಸೂತ್ರ', 'ಹರಿವ ನೀರಿದು', 'ವ್ಯಾಧಿ' ಮುಂತಾದ ಹತ್ತು ಹಲವು ಕವಿತೆಗಳು ಇಂದ್ರಿಯಾನುಭವಗಳ ತೀವ್ರ ಸಂವೇದನೆ ಮತ್ತು ಉತ್ಕಟ ಅಭಿವ್ಯಕ್ತಿಗೆ ಸಾಕ್ಷಿ. ನೋವಿನ ತಿಳಿವಳಿಕೆಯೂ ಆಗ ಸ್ವಂತದಲ್ಲದಿದ್ದರೂ ಅವರ ಸಂವೇದನೆಗೆ ನಿಲುಕಿತ್ತು ಎನ್ನುವುದಕ್ಕೆ 'ದುಃಖಗೀತೆ'ಗಿಂತ ದೊಡ್ಡ ಸಾಕ್ಷಿಯಿಲ್ಲ. ಆದರೆ, ಕ್ರಮೇಣ ಅನ್ಯರ ನೋವೆಂದು